KACM510003792025

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ನ.ರಾ.ಪುರ

**ಸಿ ಸಿ ನಂ.106/2025**

ಫಿರ್ಯಾದಿಃ ಸರ್ಕಾರ (ಎನ್ ಆರ್ ಪುರ ಪೊಲೀಸರಿಂದ)

ವಿರುದ್ಧ

ಆರೋಪಿತಃ **2.** ದಿನೇಶ್ ಸಿ ಎ ಬಿನ್ ಲೇಟ್ ಅಣ್ಣಪ್ಪ,
**23** ವರ್ಷ, ವಾಸಃ ಚಿಕ್ಕಗ್ರಹಾರ ಆಡುವಳ್ಳಿ ಗ್ರಾಮ,
ನ.ರಾ.ಪುರ ತಾಲ್ಲೂಕು.

## ಭಾರತೀಯ ನಾಗರೀಕಾ ಸುರಕ್ಷಾ ಸಂಹಿತಾ ಕಲಂ **351** ರ ಪ್ರಕಾರ ಆರೋಪಿಯ ಹೇಳಿಕೆ

ಪ್ರಶ್ನೆ : 1 ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ ಕೇಳಿಸಿಕೊಂಡಿದ್ದೇನೆ.

ಪ್ರಶ್ನೆ : 2 ಪ್ರಾ.ಸಾಃ**01** ಅನಿಲ್ ಕುಮಾರ್ ಪಿ ಆರ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು ಸುಮಾರು 8 ವರ್ಷಗಳಿಂದ ಸಂಸಾರ ಸಮೇತವಾಗಿ ಶೃಂಗೇರಿ ತಾಲ್ಲೂಕಿನ ಕಿಗ್ಗ ಹೋಬಳಿಯ ಕೋಗೋಡು ಗ್ರಾಮದ ಅರಡಗೋಡು ವಾಸಿ ದಿವಂಗತ ಮಂಜಪ್ಪ ನಾಯಕರವರ ಮಗನಾದ ಶಿಶಿರ್ ರವರ ತೋಟದಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಿರುತ್ತೇನೆಂದು, ನಮ್ಮ ಮನೆಯು ಆಡುವಳ್ಳಿ ಗ್ರಾಮದ ಚಿಕ್ಕಗ್ರಹಾರದಲ್ಲಿ ಇದ್ದು, ತನಗೆ ತೋಟ ಇದ್ದ ಕಾರಣ ವಾರಕ್ಕೊಮ್ಮೆ ಊರಿಗೆ ಬಂದು ಹೋಗುತ್ತಿದ್ದೇನೆಂದು ಹಾಗೂ ಬೇರೆ ಸಮಯದಲ್ಲಿ ತನಗೆ ಸಂಬಂಧಿಸಿದ ತೋಟವನ್ನು ತನ್ನ ಅಣ್ಣ ಮತ್ತು ಅವರ ಮಕ್ಕಳು ನೋಡಿಕೊಳ್ಳುತ್ತಿದ್ದಾರೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಇಲ್ಲ

ಪ್ರಶ್ನೆ : 3 ಪ್ರಾ.ಸಾಃ**01** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 05/08/2025 ರಂದು ತಾನು ಮತ್ತು ತನ್ನ ಹೆಂಡತಿ ಮನೆಗೆ ಬಂದು ತೋಟಕ್ಕೆ ಗೊಬ್ಬರ ಹಾಕಿ ಆ ದಿನ ಅಲ್ಲೇ ಉಳಿದುಕೊಂಡಿದ್ದು ಬೆಳಿಗ್ಗೆ ನಾವು ಪುನಃ ಶೃಂಗೇರಿಗೆ ಕೆಲಸಕ್ಕೆ ಹೋಗಿರುತ್ತೇವೆಂದು, ಪುನಃ ತಾನು ದಿಃ 15/08/2025 ರಂದು ನಮ್ಮ ಊರಾದ ಚಿಕ್ಕಗ್ರಹಾರದ ಮನೆಗೆ ಬಂದು ಮನೆಯನ್ನು ನೋಡಲಾಗಿ ಸದರಿ ಮನೆಯ ಬೀಗವನ್ನು ಒಡೆಯಲಾಗಿದ್ದು, ತಾನು ಒಳಗೆ ಹೋಗಿ ನೋಡಿದಾಗ ಮನೆಯಲ್ಲಿದ್ದ ಗೋದ್ರೇಜ್ ಬೀರುವಿನ ಹ್ಯಾಂಡಲ್ ಕಟ್ಟಾಗಿದ್ದು, ಅದರಲ್ಲಿ 11 ಸಾವಿರ ರೂ. ನಗದು ಮತ್ತು 5 ಗ್ರಾಮ್ ತೂಕದ ಬಂಗಾರದ ಉಂಗುರ ಇಟ್ಟಿದ್ದು ಹಾಗೂ ಮನೆಯಲ್ಲಿ ಎರಡು ಹಂಡೆ ಮತ್ತು ಎರಡು ಕೊಡಪಾನಗಳನ್ನು ಹಾಗೂ ಅರ್ಧ ಹೆಚ್ ಪಿ ಕರೆಂಟ್ ಮೋಟರ್ ಇಟ್ಟಿದ್ದಾಗಿ ದೂರಿನಲ್ಲಿ ಹೇಳಿದ್ದು ಆದರೆ ಗಡಿಬಿಡಿಯಲ್ಲಿ ಆ ವಿಚಾರವನ್ನು ಹೇಳಿರುತ್ತೇನೆ

ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ : 4 ಪ್ರಾ.ಸಾಃ**01** ರವರು ಮುಂದುವರಿದ ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಹಣ, ಬಂಗಾರ, ಹಂಡೆ, ಕೊಡಪಾನ ಹಾಗೂ ಮೋಟರನ್ನು ತನ್ನ ಹೆಂಡತಿ ತೆಗೆದುಕೊಂಡು ಹೋಗಿದ್ದಾರೆಂದು ಹಾಗೂ ನಮ್ಮ ಮನೆಯಲ್ಲಿದ್ದ ಒಂದು ಗ್ಯಾಸ್ ಸಿಲಿಂಡರ್, 2 ಒಲೆಯ ಸ್ಟೌವ್, ಒಂದು ಸೋಲಾರ್ ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ ಹಾಗೂ ಸೋಲಾರ್ ಪ್ಯಾನಲ್ ಅನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದು, ಸದರಿ ಕಳ್ಳತನ ಮಾಡಿದ ವಸ್ತುಗಳ ಅಂದಾಜು ಮೌಲ್ಯ 15 ಸಾವಿರ ರೂ. ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 5 ಪ್ರಾ.ಸಾಃ**01** ರವರು ಮುಂದುವರಿದ ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವಸ್ತುಗಳು ಕಳ್ಳತನ ಆದ ಬಗ್ಗೆ ದಿಃ 16/08/2025 ರಂದು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆಂದು, ಅದೇ ದಿನ ಸಂಜೆ 6.00 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದಿದ್ದು, ತಾನು ತೋರಿಸಿದ ಸ್ಥಳದಲ್ಲಿ ಶಿವಕುಮಾರ್ ಹಾಗೂ ರತ್ನಾಕರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮಾಡಿ, ಕೃತ್ಯಕ್ಕೆ ಬಳಸಿದ ಸುತ್ತಿಗೆ ರಾಡು ಇವುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 6 ಪ್ರಾ.ಸಾಃ**01** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 18/08/2025 ರಂದು ಆರೋಪಿತರಾದ ನೀವು ಸಿಕ್ಕಿರುತ್ತಾರೆಂದು ಪೊಲೀಸರು ನಮ್ಮ ಮನೆ ಹತ್ತಿರ ಬಂದು ಮಹಜರನ್ನು ರಫೀಕ್ ಮತ್ತು ರಾಘವೇಂದ್ರ ರವರನ್ನು ಕರೆದುಕೊಂಡು ಬಂದು ಮ.12.00 ಗಂಟೆ ಸಮಯದಲ್ಲಿ ಮಹಜರು ಮಾಡಿ, ಫೋಟೋಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 7 ಪ್ರಾ.ಸಾಃ**01** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಂತರ ತಾನು ದೂರು ಕೊಡುವ ಕಾಲಕ್ಕೆ 11 ಸಾವಿರ ಹಣ, 5 ಗ್ರಾಮ್ ಬಂಗಾರ, 2 ಹಂಡೆ, 2 ಕೊಡಪಾನ ಹಾಗೂ ಹೆಚ್ ಪಿ ಮೋಟರ್ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದ್ದು ಆದರೆ ಸದರಿ ವಸ್ತುಗಳನ್ನು ತನ್ನ ಹೆಂಡತಿಯು ಬೇರೆ ಕಡೆ ಇಟ್ಟಿರುವುದಾಗಿ ಹೇಳಿ, ಆ ಸಂಬಂದ ತಾನು ಪೊಲೀಸರಿಗೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ : 8 ಪ್ರಾ.ಸಾಃ**01** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಬಳಿಕ ಆರೋಪಿತರಾದ ನೀವು ಆ ದಿನ ಕಳ್ಳತನ ಮಾಡಿಕೊಂಡು ಹೋದ ಒಂದು ಇಂಡೇನ್ ಗ್ಯಾಸ್ ಸಿಲಿಂಡರ್, 2 ಒಲೆಯ ಸ್ಟೌವ್, ಒಂದು ಸೋಲಾರ್

ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ ಹಾಗೂ ಸುಕಂ ಪವರ್ ಸಿಸ್ಟಮ್ ನ ಒಂದು ಸೋಲಾರ್ ಪ್ಯಾನಲ್, ಒಂದು ಕಬ್ಬಿಣದ ಸುತ್ತಿಗೆಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡಿಸಿಕೊಂಡು ಹೋಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆ :9 ಪ್ರಾ.ಸಾಃ**11** ಶ್ರೀಮತಿ ಜ್ಯೋತಿ ಎನ್ ಎ, ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 16/08/2025 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಅದನ್ನು ನಮ್ಮ ಠಾಣಾ ಗುನ್ನಾ ಸಂಖ್ಯೆಃ 70/2025 ರಲ್ಲಿ ದಾಖಲಿಸಿಕೊಂಡು ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆಃ10 ಪ್ರಾ.ಸಾಃ**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ಆಡುವಳ್ಳಿ ಗ್ರಾಮದ ಸರ್ವೆ ನಂಃ 121/1 ರಲ್ಲಿರುವ ಚಿಕ್ಕಗ್ರಹಾರದ ಚಾಸಾ 1 ರವರ ಬಾಬ್ತು ಜಮೀನಿನಲ್ಲಿರುವ ಮನೆ ಹತ್ತಿರ ಹೋಗಿ ಪಂಚರಾದ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ವಿಷಯ ತಿಳಿಸಿ ಮತ್ತು ನೋಟೀಸು ಕೊಟ್ಟಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆಃ11 ಪ್ರಾ.ಸಾಃ**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಬಳಿಕ ಚಾಸಾ 2 ಮತ್ತು 3 ರವರು ಒಪ್ಪಿಕೊಂಡ ಮೇರೆಗೆ ಚಾಸಾ 1 ರವರು ಇದೇ ಮನೆಯಲ್ಲಿ ಕಳ್ಳತನ ಆಗಿರುತ್ತದೆ ಎಂದು ತೋರಿಸಿದ ಮೇರೆಗೆ ಮನೆಯ ಮುಂಭಾಗದಲ್ಲಿ ಹಾಕಿದ್ದ ಬೀಗವನ್ನು ಯಾವುದೋ ಆಯುಧದಿಂದ ಮೀಟಿ ಬೀಗವನ್ನು ಒಡೆದು ಮನೆಯ ಒಳಗೆ ಪ್ರವೇಶ ಮಾಡಿ ಮನೆಯಲ್ಲಿಟ್ಟಿದ್ದ 11 ಸಾವಿರ ನಗದು, ಸುಮಾರು 5 ಗ್ರಾಮ್ ತೂಕದ ಬಂಗಾರದ ಉಂಗುರ, ಮನೆಯಲ್ಲಿದ್ದ 21 ಕೆ ಜಿ ತೂಕದ 2 ತಾಮ್ರದ ಹಂಡೆ ಹಾಗೂ 2 ಕೊಡಪಾನಗಳನ್ನು ಹಾಗೂ ಒಂದು ರೂಮಿನಲ್ಲಿಟ್ಟಿದ್ದ 12 ವ್ಯಾಟ್ ಸೋಲಾರ್ ಬ್ಯಾಟರಿ ಹಾಗೂ ಮನೆಯ ಮೇಲಿದ್ದ ಸೋಲಾರ್ ಪ್ಯಾನಲ್, ಅರ್ಧ ಹೆಚ್ ಪಿ ಕರೆಂಟ್ ಮೋಟರ್ ಹಾಗೂ ಗ್ಯಾಸ್ ಸಿಲಿಂಡರನ್ನು ಕಳ್ಳತನ ಮಾಡಿಕೊಂಡು ಹೋದ ಜಾಗ ಇದೇ ಎಂದು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಸಂಜೆ 6.00-7.00 ರವರೆಗೆ ಮಹಜರು ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ: [signature]

ಪ್ರಶ್ನೆಃ12 ಪ್ರಾ.ಸಾಃ**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ಮಹಜರು ಮಾಡುವ ಕಾಲಕ್ಕೆ ಕೃತ್ಯ ಸ್ಥಳದ ಕಚ್ಚಾ ನಕಾಶೆ ತಯಾರಿಸಿ, ಭಾವಚಿತ್ರಗಳನ್ನು ತೆಗೆಸಿರುತ್ತೇನೆ ಎಂದು, ಮಹಜರು ಮಾಡುವ ಕಾಲಕ್ಕೆ ಮನೆಯ ಮುಂದೆ ಬಿದ್ದಿದ್ದ ಒಂದು ಸ್ಟೀಲ್ ಬೀಗ ಹಾಗೂ ತುಂಡಾದ ಕೊಂಡಿಯನ್ನು ಹಾಗೂ 9

ಸೆಂ. ಮೀಟರ್ ಉದ್ದದ ಗೋದ್ರೇಜ್ ಬೀರುವಿನ ಹೆಬ್ಬೆರಳು ಗಾತ್ರದ ಮುರಿದ ಸ್ಟೀಲ್ ಲಾಕರ್ ರಾಡನ್ನು ಮುಂದಿನ ಕ್ರಮದ ಬಗ್ಗೆ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ತನ್ನ ಹಾಗೂ ಪಂಚರ ಹಾಗೂ ಪಿರ್ಯಾದಿದಾರರ ಸಹಿಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ:13 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವಸ್ತುಗಳನ್ನು ನಮ್ಮ ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನಿವೇದನೆ ಮಾಡಿಕೊಂಡಿರುತ್ತೇನೆಂದು ನಂತರ ದಿ:17/08/2025 ರಂದು ಈ ಕೇಸಿನ ಆರೋಪಿಯಾದ ನಿಮ್ಮ ಪತ್ತೆಗಾಗಿ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ 12 ಮತ್ತು 13 ರವರನ್ನು ನೇಮಕ ಮಾಡಿದ್ದು, ಅದೇ ದಿನ ರಾತ್ರಿ 8.30 ಗಂಟೆಗೆ ಆರೋಪಿತರಾದ ನಿಮ್ಮನ್ನು ಠಾಣೆಗೆ ತಂದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದು ಆ ಕಾಲಕ್ಕೆ ಅವರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ:14 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿ: 18/08/2025 ರಂದು ಆರೋಪಿತರಾದ ನೀವು ತಾವು ಕಳ್ಳತನ ಮಾಡಿದ ಜಾಗವನ್ನು ಮತ್ತು ಕಳ್ಳತನ ಮಾಡಿದ ವಸ್ತುಗಳನ್ನು ಮಾರಾಟ ಮಾಡಿದ ಜಾಗವನ್ನು ತೋರಿಸುತ್ತೇವೆ ಎಂದು ತಾವು ಸ್ವ ಇಚ್ಛೆ ಹೇಳಿಕೆಯನ್ನು ನೀಡಿದ ಮೇರೆಗೆ ಸದರಿಯವರು ಆಡುವಳ್ಳಿ ಗ್ರಾಮದ ಸರ್ವೆ ನಂ: 121/1 ರಲ್ಲಿ ಚಾಸಾ 1 ರವರ ಮನೆಯನ್ನು ತೋರಿಸಿದ್ದು ಪಂಚರಾದ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಅವರಿಗೆ ಘಟನೆ ಬಗ್ಗೆ ಮಾಹಿತಿ ನೀಡಿ ಅವರು ಒಪ್ಪಿಕೊಂಡ ಮೇರೆಗೆ ಅವರಿಗೆ ನೋಟೀಸು ಜಾರಿ ಮಾಡಿ, ಅವರ ಸಮಕ್ಷಮ ಮಹಜರು ಕ್ರಮವನ್ನು ಮ.12.20 ರಿಂದ 12.50 ವರೆಗೆ ಜರುಗಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ:15 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ತಾವು ಕೃತ್ಯಕ್ಕೆ ಬಳಸಿದ ಒಂದು ಕಬ್ಬಿಣದ ಸುತ್ತಿಗೆಯನ್ನು ತೋರಿಸಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆಂದು ನಂತರ ತಾವು ಕಳ್ಳತನ ಮಾಡಿದ್ದ ವಸ್ತುವನ್ನು ಮಾರಾಟ ಮಾಡಿದ್ದವರ ಮನೆಯನ್ನು ತೋರಿಸುವುದಾಗಿ ನುಡಿದಿದ್ದು ನಂತರ ನಾವು ಅಲ್ಲಿಂದ ಚಿಕ್ಕಗ್ರಹಾರದಲ್ಲಿರುವ ರಂಗಪ್ಪಗೌಡ ರವರ ಮನೆಗೆ ಹೋಗಿ ಅವರ ಮಗನಾದ ಚಾಸಾ 10 ರವರಿಗೆ ಗ್ಯಾಸ್ ಸಿಲಿಂಡರ್ ಹಾಗೂ ಸೋಲಾರ್ ಪ್ಯಾನಲ್ ಗಳನ್ನು ನೀಡಿರುತ್ತೇವೆಂದು ನುಡಿದಿದ್ದು ಅದನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಚಾಸಾ 10 ರವರು ಗ್ಯಾಸ್ ಸಿಲಿಂಡರ್ ಹಾಗೂ ಸೋಲಾರ್ ಪ್ಯಾನಲ್ ತೋರಿಸಿದ್ದು ಅದನ್ನು ಚಾಸಾ 1 ರವರು ತಮ್ಮದೇ ಎಂದು ಗುರುತಿಸಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದು ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆಂದು ಹಾಗೂ ಸದರಿ ಮಹಜರನ್ನು ಮ. 1.00-1.30

ಗಂಟೆಯವರೆಗೆ ಜರುಗಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ:16 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಆರೋಪಿತರಾದ ನೀವು ಇನ್ನೂಳಿದ ವಸ್ತುಗಳನ್ನು ಗಡಿಗೇಶ್ವರ ಗ್ರಾಮದ ಮಹೇಶ್ ರವರಿಗೆ ಮಾರಾಟ ಮಾಡಿರುತ್ತೇವೆ ಎಂದು ತಾವು ಬಂದರೆ ಆ ಮನೆಯನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಅಲ್ಲಿಂದ ಗಡಿಗೇಶ್ವರ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು ಸದರಿ ಮನೆ ನಾಗರತ್ನ ಕೋಂ ಸದಾಶಿವ ರವರ ವಾಸದ ಮನೆಯಾಗಿದ್ದು ಆ ಮನೆಯಲ್ಲಿ ಮಹೇಶ್(ಚಾಸಾ 9 ) ಎನ್ನುವವರು ವಾಸವಿದ್ದು, ಇದೇ ಮನೆಯಲ್ಲಿ ತಾವು ಉಳಿದ ವಸ್ತುಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ್ದು ಸದರಿ ಮಹೇಶ್ ರವರು ಅವರಿಗೆ ಕೊಟ್ಟಿದ್ದ ಒಂದು ಇಸ್ತ್ರಿ ಪೆಟ್ಟಿಗೆ, ಗ್ಯಾಸ್ ಸ್ಟೌವ್ ಹಾಗೂ ಒಂದು ಚಾರ್ಜರ್ ಬ್ಯಾಟರಿ ಅನ್ನು ನಮ್ಮ ಸಮಕ್ಷಮ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ:17 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ವಸ್ತುಗಳನ್ನು ಚಾಸಾ 1 ರವರು ತಮ್ಮ ಮನೆಯ ವಸ್ತುಗಳೆಂದು ಗುರುತಿಸಿದ್ದು, ಸದರಿ ಎಲ್ಲಾ ವಸ್ತುಗಳಿಗೆ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ ಎಂದು, ಸದರಿ ಮಹಜರನ್ನು ಮ. 1.35 ರಿಂದ 2.15 ವರೆಗೆ ಮಾಡಿ ಆ ಕಾಲಕ್ಕೆ ಭಾವಚಿತ್ರಗಳನ್ನು ತೆಗೆಸಿ, ವಶಪಡಿಸಿಕೊಂಡ ವಸ್ತುಗಳನ್ನು ಠಾಣಾ ಸ್ವತ್ತು ಪಟ್ಟಿಯಲ್ಲಿ ನಮೂದಿಸಿರುತ್ತೇನೆ ಎಂದು ನಂತರ ಆರೋಪಿತರು ತನಿಖೆಗೆ ಅವಶ್ಯಕತೆ ಇಲ್ಲದೇ ಇರುವ ಕಾರಣ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ

ಪ್ರಶ್ನೆ:18 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ 14 ರವರಿಂದ ಕಲಂ 63(4)(ಸಿ) ಬಿ ಎಸ್ ಎ ರೀತ್ಯಾ ಪ್ರಮಾಣ ಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು ಬಳಿಕ ಚಾಸಾ 1 ರವರ ಮರುಹೇಳಿಕೆ ಹಾಗೂ ಚಾಸಾ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ನಂತರ ಈ ಪ್ರಕರಣದ ಸಾಕ್ಷಿದಾರರಾದ ಚಾಸಾ 7 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ:19 ಪ್ರಾ.ಸಾ:**11** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿ: 25/08/2025 ರಂದು ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಪಿ ಡಿ ಓ ಆಡುವಳ್ಳಿ ಗ್ರಾಮ ಪಂಚಾಯ್ತಿಗೆ ದಾಖಲೆ ಒದಗಿಸುವಂತೆ ಮನವಿ ಮಾಡಿಕೊಂಡಿದ್ದು, ದಿ:18/10/2025 ರಂದು ಅವರು ನೀಡಿದ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು ನಂತರ ಈ ಪ್ರಕರಣದ ತನಿಖೆ ಮುಕ್ತಾಯವಾಗಿದ್ದರಿಂದ ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾದ

ಕಾರಣ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ:

ಪ್ರಶ್ನೆ :20 ನಿಮ್ಮ ಪರವಾಗಿ ಸಾಕ್ಷಿ ಏನಾದರೂ ಮಾಡಿಸುತ್ತೀರಾ?

ಉತ್ತರಃ

ಪ್ರಶ್ನೆ :21 ನೀವೇನಾದರು ಹೇಳುವುದು ಇದೆಯಾ?

ಉತ್ತರಃ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ 2 ನೇ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢಿಕರಿಸಲಾಗಿದೆ.

ದಿನಾಂಕ **24** ನೇ ದಿವಸ ಮಾರ್ಚ್ ಮಾಹೇ **2026** ನೇ ಇಸವಿ

(ರಘುನಾಥ ಗೌಡ ಕೆ.ಟಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್‌ಸಿ
ನ.ರಾ.ಪುರ.